# 4

# ಪರಿಪಕ್ವತೆ

## (5:11-6:20)

ಅಪಾಯದಲ್ಲಿ ಸಿಲುಕಿದ ಜನರಿಗಾಗಿ ಇಬ್ರಿಯ ಪುಸ್ತಕವನ್ನು ಬರೆಯಲಾಗಿದೆ. ಅವರು ಪ್ರಥಮ ಬಾರಿ ಈ ಪತ್ರಿಕೆಯನ್ನು ಓದುವಾಗ, ಯಾವ ಪರಿಸ್ಥಿತಿಯಲ್ಲಿದ್ದರು? ಅದರ ಕುರಿತು:

> ಈ ವಿಷಯದಲ್ಲಿ ನಾವು ಹೇಳಬೇಕಾದ ಮಾತು ಬಹಳವುಂಟು, ಆದರೆ ನಿಮ್ಮ ಕಿವಿಗಳು ಮಂದವಾದದರಿಂದ ಅದನ್ನು ವಿವರಿಸುವದು ಕಷ್ಟವಾಗಿದೆ. ಕಾಲವನ್ನು ನೋಡಿದರೆ ನೀವು ಇಷ್ಟರೊಳಗೆ ಬೋಧಕರಾಗಿರಬೇಕಾಗಿದ್ದರೂ ಒಬ್ಬನು ನಿಮಗೆ ದೈವೋಕ್ತಿಗಳ ಮೂಲಪಾಠಗಳನ್ನು ತಿರಿಗಿ ಕಲಿಸಿಕೊಡಬೇಕಾಗಿದೆ; ನೀವು ಹಾಲು ಕುಡಿಯತಕ್ಕವರೇ ಹೊರತು ಗಟ್ಟಿಯಾದ ಆಹಾರವನ್ನು ತಿನ್ನತಕ್ಕವರಲ್ಲ. ಹಾಲು ಬೇಕಾದವನು ಕೂಸಿನಂತಿದ್ದು ನೀತಿವಾಕ್ಯದಲ್ಲಿ ಅನುಭವವಿಲ್ಲದವನಾಗಿದ್ದಾನೆ. ಗಟ್ಟಿಯಾದ ಆಹಾರವು ಪ್ರಾಯಸ್ಥರಿಗೋಸ್ಕರ ಅಂದರೆ ಜ್ಞಾನೇಂದ್ರಿಯಗಳನ್ನು ಸಾಧನೆಯಿಂದ ಶಿಕ್ಷಿಸಿಕೊಂಡು ಇದು ಒಳ್ಳೇದು ಅದು ಕೆಟ್ಟದ್ದು ಎಂಬ ಭೇದವನ್ನು ತಿಳಿದವರಿಗೋಸ್ಕರವಾಗಿದೆ (5:11-14).

ಅವರು ಸಿದ್ಧಿಗೆ ಬಂದಿರಲಿಲ್ಲ, ಆತ್ಮೀಕ ಹಸುಗೂಸುಗಳಾಗಿದ್ದರು. ಗಟ್ಟಿಯಾದ ಆಹಾರವನ್ನು ಸೇವಿಸಲು ಅಸಮರ್ಥರಾಗಿದ್ದರು. ಅವರು ಕ್ರೈಸ್ತ ಬೋಧಕರಾಗಿರಬೇಕಿದ್ದರೂ, ಅವರುಗಳಿಗೆ ಪ್ರಾಥಮಿಕ ಬೋಧನೆಯ ಅಗತ್ಯವಿತ್ತು!

ಸಭೆಯಲ್ಲಿರುವ ಅನೇಕರನ್ನು ಇವರಿಗೆ ಹೋಲಿಸಬಹುದು. ಅನೇಕ ವರ್ಷಗಳಿಂದ ಕ್ರೈಸ್ತರಾಗಿದ್ದರೂ, ಆತ್ಮೀಕವಾಗಿ ಪರಿಪಕ್ವತೆಗೆ ಬಂದಿರುವದಿಲ್ಲ. ದೇವರ ವಾಕ್ಯದ ಗಟ್ಟಿಯಾದ ಆಹಾರವನ್ನು ಸ್ವೀಕರಿಸಲು ಅಸಮರ್ಥರಾಗಿದ್ದಾರೆ. ಅವರು ಸುವಾರ್ತೆಯ ತಿರುಳನ್ನು ಅರ್ಥಮಾಡಿಕೊಳ್ಳಲು ಅಸಮರ್ಥರಿರುವದರಿಂದ, ಹಸುಗೂಸುಗಳ ಆಹಾರವನ್ನು ಅವರಿಗೆ ನೀಡಬೇಕಿದೆ!

ಇಬ್ರಿಯ ಕ್ರೈಸ್ತರಂತೆ, ನಮ್ಮಲ್ಲಿಯೂ ಅನೇಕರು ಪರಿಪಕ್ವತೆಗೆ ಬಾರದೆ ಇರುವಾಗ, ಅವರುಗಳು ಏನು ಮಾಡಬೇಕೆಂಬ ವಿಚಾರವನ್ನು ತಿಳಿಯೋಣ. ಅವರು ಹೊಂದಿದ ಪವಿತ್ರಾತ್ಮನ ಸಂದೇಶವು ನಾವುಗಳು ಪರಿಪಕ್ವತೆಗೆ ಬರುವಂತೆ ಸಹಾಹಿಸುತ್ತವೆ.

### ಪರಿಪಕ್ವತೆಗೆ ಬಾರದ ಕ್ರೈಸ್ತರು ಏನು ಮಾಡಬೇಕು?

ಮೊದಲ ಶತಮಾನದಲ್ಲಿದ್ದ ಸಿದ್ಧಿಗೆ ಬಾರದ ಹಾಗು "ಕಠಿಣರಾದ" ಹಸುಗೂಸು ಗಳಂತಿದ್ದವರು ಏನು ಮಾಡಬೇಕಿತ್ತು? ಇಬ್ರಿಯ 6:1, 2ರಲ್ಲಿ ಓದಿರಿ:

> ಆದದರಿಂದ ನಿರ್ಜೀವಕರ್ಮಗಳ ಮೇಲಣ ನಂಬಿಕೆಯನ್ನು ಬಿಟ್ಟುಬಿಟ್ಟು ದೇವರಲ್ಲಿಯೇ ನಂಬಿಕೆಯಿಡಬೇಕಾದದ್ದು, ಸ್ನಾನ ಹಸ್ತಾರ್ಪಣಗಳ ವಿಷಯವಾದ ಉಪದೇಶ, ಸತ್ತವರಿಗೆ ಪುನರುತ್ಥಾನವೂ ನಿತ್ಯವಾದ ನ್ಯಾಯತೀರ್ಪೂ ಉಂಟೆಂಬದು ಇವುಗಳನ್ನು ಪದೇಪದೇ ಅಸ್ತಿವಾರವಾಗಿ ಹಾಕದೆ ಕ್ರಿಸ್ತನ ವಿಷಯವಾದ ಪ್ರಥಮಬೋಧನೆಯನ್ನು ಕುರಿತು ಇನ್ನೂ ಮಾತಾಡದೆ ಪೂರ್ಣವಾದ ತಿಳುವಳಿಕೆಗೆ ಸಾಗುತ್ತಾ ಹೋಗೋಣ.

ಅವರು “ಪೂರ್ಣ ತಿಳುವಳಿಕೆಗೆ” ಹೋಗಬೇಕಿತ್ತು (KJV ಪರಿಪಕ್ವತೆ ಎಂಬ ಅನುವಾದ) ನಾವುಗಳು ಸಹ ಅದೇ ಗುರಿಗೆ ಮುಂದೆ ಸಾಗಬೇಕು.

ನಾವು ಕ್ರೈಸ್ತರಾಗುವಾಗ, ಹೊಸದಾಗಿ ಹುಟ್ಟುತ್ತೇವೆ. ಕ್ರಿಸ್ತನಲ್ಲಿ ಹಸುಗೂಸುಗಳಾಗಿ ಕ್ರೈಸ್ತ ಜೀವಿತವನ್ನು ಆರಂಭಿಸುತ್ತೇವೆ. ನಾವು ಸಭೆಯಲ್ಲಿ ಮುಂದುವರೆಯುವಾಗ, ಪೂರ್ಣ ತಿಳುವಳಿಕೆಯಲ್ಲಿ ವೃದ್ಧಿಹೊಂದಿದವರಾಗಬೇಕು (ನೋಡಿರಿ 2 ಪೇತ್ರ 3:18)!

ಈ ಗುರಿಯನ್ನು ಹೇಗೆ ಸಾಧಿಸಬಹುದು? ದೇವರ ವಾಕ್ಯದಲ್ಲಿ ಪಾಲು ತೆಗೆದುಕೊಳ್ಳು ವದರಿಂದ ಸಾಧಿಸಬಹುದು (1 ಪೇತ್ರ 2:2). ದೇವರ ವಾಕ್ಯವು ನಮಗೆ ಅಮೂಲ್ಯವಾಗಿದ್ದು ಅದಕ್ಕಾಗಿ ತವಕ ಪಡಬೇಕು (ಕೀರ್ತನೆ 19:10ಬಿ; ಮತ್ತಾಯ 5:6). ದೇವರ ವಾಕ್ಯವಿಲ್ಲದೆ. ಯಾವ ಕ್ರೈಸ್ತನು ಸಹ ಪೂರ್ಣ ತಿಳುವಳಿಕೆಗೆ ಸಾಗಲು ಸಾಧ್ಯವಿಲ್ಲ.

ದೇವರ ವಾಕ್ಯದ ತಿಳುವಳಿಕೆ ಅಂದರೆ, ಸುವಾರ್ತೆಯ ಪ್ರಾಥಮಿಕ ಬೋಧನೆಗೆ ಸೀಮಿತ ಗೊಳ್ಳುವದಲ್ಲ (ಪ್ರಾಥಮಿಕ ಬೋಧನೆ).[1] ದಡದಿಂದ, ಆಳವಾದ ನೀರಿಗೆ ಹೋಗು ವವರಾಗಬೇಕು. ಪ್ರೇರಿತನಾದ ಬರಹಗಾರನು ತಿಳಿಸಿರುವಂತೆ ದೇವರ ವಾಕ್ಯದ ಭಲವಾದ ವಾಕ್ಯಗಳನ್ನು ತಿಳಿದುಕೊಳ್ಳಬೇಕು. ಹೊಸ ಒಡಂಬಡಿಕೆಯ ವಾಕ್ಯಗಳನ್ನು ಕಲಿತುಕೊಳ್ಳಲು ಆಸಕ್ತಿ ಇಲ್ಲದಿದ್ದರೆ, ಕೇವಲ ಪ್ರಾಥಮಿಕ ಬೋಧನೆಯನ್ನು ಮಾತ್ರ ಅರಿತವರಾಗಿದ್ದೇವೆ! ಸಭೆಗಳು ಹಾಗೂ, ಜನರು ವ್ಯಕ್ತಿಗತವಾಗಿ ಈ ಸಂದೇಶವನ್ನು ಕೇಳಬೇಕು. ಸಭೆಯ ಸದಸ್ಯರಲ್ಲಿ ಕೇಳುವ ಅಥವಾ ಕೇಳದೆ ಇರಬಹುದಾದ ಸಮಸ್ಯೆ ಇರಬಹುದು “ಆದರೆ ಪ್ರಥಮ ಬೋಧನೆಯಲ್ಲಿಯೇ ಇರಬಹುದು” (5:12).

ನಾವು ಮೂಲಪಾಠಗಳನ್ನು ಬಿಡಬೇಕು ಎಂಬ ಬರಹಗಾರನ ಹೇಳಿಕೆಯಲ್ಲಿ, ಕ್ರೈಸ್ತರು ಮೂಲ ಭೂತ ವಾಕ್ಯಗಳನ್ನು ಬೋಧಿಸಬಾರದು ಎಂದು ಹೇಳುತ್ತಿರುವದಿಲ್ಲ,[2] ಆದರೆ ಮೂಲ ಪಾಠಗಳು ಪ್ರಮುಖವಾಗಿರದೆ, ಮೂಲ ಪಾಠಗಳಿಂದ ಭಿನ್ನವಾಗಿರುವ ವಾಕ್ಯಗಳನ್ನು ಕೇಳುವ ಅವಕಾಶವನ್ನು ಮಾಡಿಕೊಳ್ಳಬೇಕು. ಕೆಲವು ಸಭೆಗಳವರು ಈ ವಾಕ್ಯವನ್ನು ಅಪಾರ್ಥಮಾಡಿಕೊಂಡು ಮೂಲ ಪಾಠಗಳನ್ನು ಪೂರ್ಣವಾಗಿ ನಿರಾಕರಿಸುವವರೂ ಆಗಿರುತ್ತಾರೆ. ಹೀಗಾದರೆ, ಸದಸ್ಯರುಗಳು ಅವರ ನಂಬಿಕೆಯ ಮೂಲವನ್ನು ಸಹ ಅರಿಯಲಾರರು!

ಆದ್ದರಿಂದ ಅಗತ್ಯವಿರುವದನ್ನು ಅರಿತು, ತನ್ನ ಓದುಗರು ಪೂರ್ಣ ತಿಳುವಳಿಕೆಗೆ ಸಾಗ ಬೇಕೆಂದು ಇಬ್ರಿಯ ಬರಹಗಾರನು ಮನವಿ ಮಾಡಿದನು?

## ಪರಿಪಕ್ವ ಹೊಂದಿದ ಕ್ರೈಸ್ತರು “ಪೂರ್ಣ ತಿಳುವಳಿಕೆಗೆ ಏಕೆ ಸಾಗಬೇಕು”?

6ನೇ ಅಧ್ಯಾಯದಲ್ಲಿ ತನ್ನ ಓದುಗರು “ಪೂರ್ಣ ತಿಳುವಳಿಕೆಗೆ” ಸಾಗಬೇಕೆಂದು ಕಠಿಣ ವಾಗಿ ತಿಳಿಸುತ್ತಿದ್ದಾನೆ.[3] ಆದ್ದರಿಂದ ಇಲ್ಲಿ ಎರಡು ಕಾರಣಗಳನ್ನು ನೀಡಿರುವನು.

*ಮೊದಲನೆಯದಾಗಿ, ಅವರು ನಂಬಿಕೆಯಿಂದ ಹಿಂಜರಿದು ಹೋಗದಂತೆ, ಪೂರ್ಣ ತಿಳುವಳಿಕೆಯನ್ನು ಹೊಂದಿಕೊಳ್ಳಬೇಕಿತ್ತು* (ಓದಿರಿ ಇಬ್ರಿಯ 6:4-8). ಅಂದರೆ ಹಿಂಜರಿಯುವ ಸಾಧ್ಯತೆಯಿದೆ ಎಂದು ಈ ವಾಕ್ಯಭಾಗ ತಿಳಿಸುತ್ತದೆ! ಕೆಲವರು “ಹಿಂಜರಿದಿರುವರು” ಎಂದು ಧೈರ್ಯವಾಗಿ ಹೇಳಿರುವನು (6:6). ಅವರು ಭ್ರಷ್ಟರಾಗಿದ್ದರು ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ.

ಯಥಾರ್ಥರಾದ ಕ್ರೈಸ್ತರು ಸಹ ಹಿಂಜರಿಯುವ ಸಾಧ್ಯತೆಯಿದೆ. ಭ್ರಷ್ಟರಾದರು ಎಂದು ಕ್ಲುಪ್ತವಾಗಿ ತಿಳಿಸಲಾಗಿದೆ. “ಒಂದು ಸಾರಿ ಜ್ಞಾನ ಪ್ರಕಾಶದಲ್ಲಿ ಸೇರಿದವರು ಪರಲೋಕ ದಿಂದಾದ ದಾನದ ಅನುಭವವನ್ನು ಹೊಂದಿ, ಪವಿತ್ರಾತ್ಮವರದಲ್ಲಿ ಪಾಲುಗಾರರಾಗಿದ್ದಾರೆ” (6:4). ಯಥಾರ್ಥವಾದ ಕ್ರೈಸ್ತರ ಕುರಿತು ಈ ಹೇಳಿಕೆಯನ್ನು ಹೇಳಿರುವದಿಲ್ಲ![4]

ಭ್ರಷ್ಟತೆಯು[5] ಕ್ರೈಸ್ತರನ್ನು ಅಪಾಯದ ಸ್ಥಿತಿಗೆ ಸಿಲುಕಿಸಿತು. ಹಿಂಜರಿದು ಹೋಗು

ವವರು ಬಹಳ ಅಪಾಯದ ಪರಿಸ್ಥಿತಿಯಲ್ಲಿರುವವರು ಎಂದು ಈ ವಚನಗಳು ಬೋಧಿಸುತ್ತವೆ: "ಅವರಲ್ಲಿ ತಿರಿಗಿ ಮಾನಸಾಂತರವನ್ನು ಹುಟ್ಟಿಸುವದು ಅಸಾಧ್ಯ" (6:6). ಇದರ ಅರ್ಥವೇನು? ಒಬ್ಬ ಕ್ರೈಸ್ತನು ಒಂದೂ ಪಾಪ ಮಾಡದೆ "ಕ್ಷಮಿಸಲಾರದ ಪಾಪವನ್ನು ಮಾಡಬಹುದು" ಎಂಬ ಅರ್ಥವಲ್ಲ. ಆದರೆ ಪಾಪವನ್ನು ಮುಂದುವರೆಸಬಾರದು, ಮುಂದುವರೆಸಿದರೆ, ದೇವರ ಮಗನನ್ನು ಪುನಃ ಶಿಲುಬೆಗೆ ಹಾಕುವವರಾಗಿದ್ದಾರೆ. ಪಾಪ ಮಾಡುತ್ತಾ ಮುಂದುವರೆಯುವವರನ್ನು ಮಾನಸಾಂತರಕ್ಕೆ ನಡೆಸುವದು ಕಷ್ಟಕರವಾಗಿದೆ. ಅಂದರೆ ಇತರರು ಸಹ ಅವರನ್ನು ಮಾನಸಾಂತರಕ್ಕೆ ನಡೆಸಲಾರರು ಎಂಬ ಅರ್ಥವಾಗಿದೆ. ಅವರು ಮಾನಸಾಂತರವನ್ನು ತಾವೇ ಆಯ್ಕೆ ಮಾಡಿಕೊಂಡರೆ, ರಕ್ಷಣೆ ಹೊಂದುವರು. ನಂತರದ ಅಂಶವೇನೆಂದರೆ ಈ ಸಂಗತಿಗಳು ನಮ್ಮಲ್ಲಿ ಮುಂದುವರೆಯಬಾರದು! ಭ್ರಷ್ಟತನವನ್ನು ಮಾಡಿ ಮಾನಸಾಂತರದ ಪರಿಸ್ಥಿತಿಗೆ ಬಾರದ ಸ್ಥಿತಿಗೆ ಒಳಪಡಬಾರದು!

ಆತ್ಮೀಕ ತಿಳುವಳಿಕೆ ಇಲ್ಲದೆ ಹೋದರೆ, ಭ್ರಷ್ಟತೆ ಉಂಟಾಗುತ್ತದೆ. ನಾವು ಪೂರ್ಣ ತಿಳುವಳಿಕೆಗೆ ಸಾಗದೆ ಹೋದರೆ, ಭ್ರಷ್ಟತೆಯ ತುದಿಯಲ್ಲಿದ್ದೇವೆ ಎಂದು ವಾಕ್ಯವು ತಿಳಿಸುತ್ತದೆ.

ನಾಶನವೇ ಭ್ರಷ್ಟತೆಯ ಪರಿಣಾಮವಾಗಿದೆ. 6:7, 8ರಲ್ಲಿ, ಒಬ್ಬ ಕ್ರೈಸ್ತನು ಭ್ರಷ್ಟತೆಯನ್ನು ಅನುಸರಿಸಿದರೆ, ಅದರಿಂದಾಗುವ ಪರಿಣಾಮದ ನಿದರ್ಶನವನ್ನು ನೀಡಲಾಗಿದೆ. ಮಳೆಯಿಂದ ತೊಯ್ದ ಭೂಮಿಯು ಉತ್ತಮವಾದ ಫಲವನ್ನು ನೀಡುವಂತೆ, ಒಬ್ಬ ಕ್ರೈಸ್ತನು ಆಶೀರ್ವಾದವನ್ನು ತರಬೇಕು. ಆದರೆ ಆ ಭೂಮಿಯು ಮುಳ್ಳು ಕಳೆಗಳನ್ನು ಬೆಳೆಸಿದರೆ - ಅವರು ಬಿದ್ದು ಹೋಗುತ್ತಾರೆ - ನಂತರ ಆ ಭೂಮಿಯು ಸುಡಲ್ಪಡುತ್ತದೆ. ಅವರು ನಾಶ ಹಾಗು ಬೆಂಕಿಗೆ ತುತ್ತಾಗುತ್ತಾರೆ (ಹೋಲಿಕೆ 10:26-31)!

*ಎರಡನೆಯದಾಗಿ, ನಮಗಿರುವ ನಿರೀಕ್ಷೆಯ ಕಾರಣದಿಂದ ನಾವು ಪೂರ್ಣ ತಿಳುವಳಿಕೆಗೆ ಸಾಗಬೇಕು.* (ಓದಿರಿ ಇಬ್ರಿಯ 6:9-20). ಇಲ್ಲಿ ಅವರಲ್ಲಿ ಅಡಗಿದ್ದ ವಿಷಯಗಳ ಬಗ್ಗೆ ಮಾತನಾಡಿದನು.

(1) ಅವರಲ್ಲಿದ್ದ ದೃಢವಾದ ನಂಬಿಕೆಯನ್ನು ಹೊಗಳಿದನು (6:9). ಇದರಿಂದ ಅವರಿಗೆ ಉತ್ತೇಜನವಾಯಿತು.

(2) ಅವರು ದೇವ ಜನರಿಗೆ ಮಾಡಿದ ಉಪಚಾರದ ಬಗ್ಗೆ ಮಾಡಿದನು (6:10-12), ಅವರು ಮಾಡಿದ ಈ ಕೃತ್ಯಗಳನ್ನು ದೇವರು ಮರೆಯಲಾರನು ಮತ್ತು "ಅದರಲ್ಲಿ ಮುಂದುವರೆಯ ಬೇಕೆಂದು ಪ್ರೋತ್ಸಾಹಿಸಿದನು. ಕಡೇ ತನಕ ಆ ನಿರೀಕ್ಷೆಯನ್ನು ಹಿಡಿಯುವದರಲ್ಲಿ ಪ್ರತಿಯೊಬ್ಬರು ಆಸಕ್ತಿಯನ್ನು ತೋರಿಸಬೇಕು ಎಂದು ಹೇಳಿದನು."

(3) ದೇವರ ವಾಗ್ದಾನಗಳ ನಿಮಿತ್ತ ಅವರುಗಳು ಹೊಂದಬಹುದಾದ ದೃಢ ನಿರೀಕ್ಷೆಯ ಬಗ್ಗೆ ಮಾತನಾಡಿದನು. ಅವುಗಳು ಬದಲಾಗದ ನಿರೀಕ್ಷೆ ಅಂದನು (6:13-20). ಅಬ್ರಹಾಮನು ತಾಳ್ಮೆಯಿಂದ ಇದ್ದರಿಂದ ದೇವರ ವಾಗ್ದಾನವನ್ನು ಸ್ವೀಕರಿಸಿದನು ಎಂಬ ನಿದರ್ಶನವನ್ನು ನೀಡಿರುವನು (6:13-15). ದೇವರ ವಾಗ್ದಾನಗಳನ್ನು ಖಂಡಿತವಾಗಿ ಸ್ವೀಕರಿಸಬಹುದು ಅದಕ್ಕೆ ಎರಡು ಬದಲಾಗದ ಕಾರಣಗಳಿವೆ. ಸ್ವಭಾವತಃ ದೇವರು ಎಂದಿಗೂ ಬದಲಾಗುವವನಲ್ಲ, ಹಾಗೂ ಆಣೆಯಿಂದಾದ ದೇವರ ವಾಗ್ದಾನವು ಸಹ ಬದಲಾಗುವದಿಲ್ಲ. ದೇವರ ನಂಬಿಗಸ್ತಿಕೆಯು ವಾಗ್ದಾನವನ್ನು ದೃಢಪಡಿಸಿ ನಮಗೆ, ನಮ್ಮ ಮುಂದಿರುವ ನಿರೀಕ್ಷೆಯನ್ನು ಹಿಡಿದುಕೊಳ್ಳಲು ಉತ್ತೇಜಿಸುತ್ತೇವೆ. ಆ ನಿರೀಕ್ಷೆಯು ನಮ್ಮ ಪ್ರಾಣಕ್ಕೆ ಲಂಗರಾಗಿದೆ (6:19). ಅದು ಭರವಸಕ್ಕೆ ಯೋಗ್ಯವಾಗಿದ್ದು ಸ್ಥಿರವಾದದ್ದೂ ಆಗಿದೆ. ನಮ್ಮ ನಿರೀಕ್ಷೆಯು ನಿತ್ಯವಾದದ್ದಾಗಿದೆ, ಅದು ತೆರೆಯೊಳಗಣ ದೇವ ಸಾನಿಧ್ಯವನ್ನು ಪ್ರವೇಶಿಸುವಂಥದ್ದು ಆಗಿದೆ (6:20). ಆದ್ದರಿಂದ ಈ ಲೋಕದಲ್ಲಿ ನಮಗೆ ಸಂಭವಿಸಬಹುದಾದ ಯಾವುದೇ ಸಂಗತಿಗಳು ನಮ್ಮನ್ನು ವಿಚಲಿತಪಡಿಸುವದಿಲ್ಲ.

## ಮುಕ್ತಾಯ

ಪೂರ್ಣ ತಿಳುವಳಿಕೆಗೆ ಸಾಗುತ್ತಾ ಹೋಗೋಣ! ಇದು ನಮಗೆ ಒಂದು ಸವಾಲಾಗಿದೆ: ಕ್ರೈಸ್ತ ಸಭೆಯಾಗಿ ನಾವು ಏನು ಮಾಡೋಣ? ಇನ್ನೂ ಹಸುಗೂಸುಗಳ ಸಮೂಹದಲ್ಲಿದ್ದೇವೆಯೇ? ನಾನು ವ್ಯಕಿಗತವಾಗಿ ಹೇಗಿರುವೆನು? ಆತ್ಮೀಕ ಕೂಸಾಗಿರುವೆನೇ? ಇದು ನಮ್ಮಲ್ಲಿ ಜರುಗದಿರಲಿ! ಜಾರಿ ಬೀಳಬಹುದು ಎಂಬ ವಿಚಾರವನ್ನು ಅರಿತವರಾಗಿ, ದೇವರ ವಾಗ್ದಾನಗಳಿಂದ ದೊರಕಿರುವ ನಿರೀಕ್ಷೆಯಿಂದ ಪೂರ್ಣ ತಿಳುವಳಿಕೆಗೆ ಸಾಗುತ್ತಾ ಹೋಗೋಣ!

---

ಟಿಪ್ಪಣೆಗಳು

[1]ಬರಹಗಾರನ ಪ್ರಕಾರ, ಸ್ನಾನ, ಹಸ್ತಾರ್ಪಣ, ಪುನರುತ್ಥಾನ, ನ್ಯಾಯತೀರ್ಪು ಎಂಬುದು ಮೂಲಪಾಠವಾಗಿದೆ. [2]ಸಭೆಗೆ ಪ್ರಥಮಬಾರಿಗೆ ಬರುವ ಕ್ರೈಸ್ತರಲ್ಲದವರು ಮೂಲ ಪಾಠಗಳನ್ನು ಕೇಳಬೇಕು. [3]ಒಂದು ಕತ್ತೆಯನ್ನು ಹತೋಟಿಗೆ ತರಲು ಆಹಾರವನ್ನು ನೀಡಬಹುದು, ಅಥವಾ ಕೋಲಿನಿಂದ ಹೊಡೆಯಬಹುದು ಇದನ್ನು “ಕ್ಯಾರೆಟ್ ಅಂಡ್ ಸ್ಟಿಕ್” ಎಂಬ ವ್ಯಾಖ್ಯಾನದಲ್ಲಿ ತಿಳಿಸಲಾಗಿದೆ. [4]ಕೆಲವರು, ಭ್ರಷ್ಟತನ ಮಾಡಲು ಅಸಾಧ್ಯ ಎಂದು ಹೇಳುತ್ತಾರೆ. ಭ್ರಷ್ಟರು ಬಿದ್ದು ಹೋದ ಕ್ರೈಸ್ತರೇ ಹೊರತು ಮಕ್ಕಳಲ್ಲ ಎಂದು ವಾದಿಸುವದರಿಂದ, ಅವರಿಗಾಗಿ ಈ ಅಂಶವನ್ನು ತಿಳಿಸಲಾಗಿದೆ. [5]ಕ್ರೈಸ್ತರು ಉದ್ದೇಶಪೂರ್ವಕವಾಗಿ ಮಾಡುವ ಪಾಪವನ್ನು ಕುರಿತು ಭ್ರಷ್ಟತೆ ಎನ್ನಲಾಗಿದೆ (10:26).